ಒ.ಎಸ್.ನಂ. 23/2018
ಪಿ. ಡಬ್ಲು. 1

ದಿನಾಂಕಃ 12.06.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ: ಶ್ರೀ. ಎ.ಎನ್.ಎ. ವಕೀಲರಿಂದ ವಾದಿಯರ ಪರವಾಗಿ.

ರಿಸ್ಪ್ಟನ ದೃಡಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಅಂತ ಮ್ಯುಟೇಶನ್ ನೊಟೀಸ ವೈವಾಟಿ ಸಂಖ್ಯೆ 67 ನೇದ್ದನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6, ಗ್ರಾಮ ಲೆಕ್ಕಾಧಿಕಾರಿಗಳು ಹಳಿಂಗಳಿ ಇವರು ನೀಡಿದ ವಂಶಾವಳಿಯ ದೃಡಿಕೃತ ಪ್ರತಿಯನ್ನು ನಿಪಿ-7 ಅಂತ ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿಮಾಡಬೇಕೆಂದು ಪ್ರಾರ್ಥನೆ.

ಪಾಟಿಸವಾಲು: ಶ್ರೀ.ಕೆ.ಡಿ.ಟಿ. ವಕೀಲರಿಂದ ಪ್ರತಿವಾದಿ ಪರವಾಗಿ.

ಸರೋಜಿನಿ ನನ್ನ ತಾಯಿ ಆಗಬೇಕು. ನಮ್ಮ ತಾಯಿಗೆ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಸದರಿಯವರು ನನಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ ಈ ದಾವೆ ಬರೆಯಲು ಮಾಹಿತಿಯನ್ನು ನಾನು ಮತ್ತು ನನ್ನ ತಾಯಿ ಕೊಟ್ಟಿರುತ್ತೇವೆ. ಈ ದಾವೆಯನ್ನು ದಾವಾ ಆಸ್ತಿಯ ಮಾಲಿಕರು ಘೋಷಣೆ ಮತ್ತು ಶಾಶ್ವತ ನಿರ್ಬಂದಕಾಜ್ಞೆ ಕೊರಿ ದಾವೆ ಸಲ್ಲಿಸಿರುತ್ತೇವೆ. ಪ್ರತಿವಾದಿ ಸದರಿ ಪ್ರಕರಣದಲ್ಲಿ ಏನು ತಕರಾರು ಹಾಕಿರುತ್ತಾರೆ ಅಂತ ಓದಿಸಿ ತಿಳಿದುಕೊಂಡಿಲ್ಲ. ಮೂಲ ಪುರುಸ ಪಾರಿಸ್ ಯಾವ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಆಗ ನಾನು ಚಿಕ್ಕವಳಿದ್ದೇನು. ನಾನು ಎಸ್.ಎಸ್.ಎಲ್.ಸಿಯವರೆಗೆ ಶಾಲೆ ಕಲಿತಿರುತ್ತೇನೆ. ಪಾರಿಸ್ ಇವರು ಎಷ್ಟು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಅಂತ ಈಗ ನೆನಪಿಲ್ಲ. ಪಾರಿಸ್ ತಂದೆಯ ಹೆಸರು ಗೊತ್ತಿಲ್ಲ. ಪಾರಿಸ್ ಇವರಿಗೆ ಒಬ್ಬಳೆ ಸಿದ್ದವ್ವ ಅಂತ ತಂಗಿ ಇದ್ದಳು. ಸಿದ್ದವ್ವ ಇವರು ತೀರಿಕೊಂಡು ಬಹಳ ವರ್ಷಗಳಾಗಿವೆ. ಸದರಿ ಮಾಹಿತಿಯನ್ನು ನಾನು ನಮ್ಮ ತಾಯಿಯಿಂದ ತಿಳಿದುಕೊಂಡಿದ್ದೆನೆಂದರೆ ಸರಿ. ಪಾರಿಸ್ ಇವರ ಹೆಂಡತಿಯ ಹೆಸರು ದೆವಕಿ ಇರುತ್ತದೆ. ದೆವಕಿ ಇವರು 2008 ರಲ್ಲಿ ತೀರಿಕೊಂಡಿರುತ್ತಾರೆ. ಪಾರಿಸ್ ಇವರಿಗೆ ಶೆಗುಣಸಿಯಲ್ಲಿ 18 ಎಕರೆ, ಹಳಿಂಗಳಿಯಲ್ಲಿ 4 ಎಕರೆ 20 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನುಗಳು ಪೂರ್ವಜರ ಜಮೀನುಗಳು ಇದ್ದು ಅವು ಯಾರಿಂದ ಬಂದಿವೆ ನನಗೆ ಗೊತ್ತಿಲ್ಲ. ಪಾರಿಸ್ ಇವರಿಗೆ ಐದು ಜನ ಗಂಡು ಮಕ್ಕಳಿದ್ದು, ನಾಲ್ಕು ಹೆಣ್ಣು

ಮಕ್ಕಳು ಇರುತ್ತಾರೆ. ಸದರಿ ಗಂಡು ಮಕ್ಕಳ ಹೆಸರು ಪಾಯಪ್ಪ, ಜಿನ್ನಪ್ಪ, ಬಾಬು, ಬುಜಬಲಿ, ಮಹಾವೀರ ಹಾಗೂ ಹೆಣ್ಣು ಮಕ್ಕಳು ಬಾಳವ್ವ ಹಳಿಂಗಳಿ, ರತ್ನವ್ವ ಇಚಲಕರಂಜಿ, ಕಾಸವ್ವ, ಲಕ್ಷ್ಮಿಬಾಯಿ ಬಾಳಿಕಾಯಿ ಅಂತ ಇರುತ್ತದೆ. ಅದೇ ರೀತಿ ಇನ್ನೊಬ್ಬ ಹೆಣ್ಣು ಮಗಳು ಇದ್ದು, ಅವಳು ತೀರಿಕೊಂಡಿದ್ದು ಅವರ ಮಕ್ಕಳು ಇರುತ್ತಾರೆ. ನಮ್ಮ ತಂದೆ ಬುಜಬಲಿ ನಾನು ಮೂರು ವರ್ಷದವರಿದ್ದಾಗ ತೀರಿಕೊಂಡಿರುತ್ತಾರೆ. ನನ್ನ ದಾವೆಯಲ್ಲಿ ಹಾಜರುಪಡಿಸಿದ ವಂಶಾವಳಿಯಲ್ಲಿ ಹೆಣ್ಣು ಮಕ್ಕಳ ಬಗ್ಗೆ ಬರೆಸಿಲ್ಲ ಎಂದರೆ ಸರಿ. 1999 ರಲ್ಲಿ ಪಾಯಪ್ಪ, ಬಾಬು, ಜಿನ್ನಪ್ಪ, ಮಹಾವೀರ ಇವರ ನಡುವೆ ಪಾಲು ವಾಟ್ನಿಯಾಗಿರುತ್ತದೆ. ಆದರೆ ನಾವು ಅದರಲ್ಲಿ ಪಕ್ಷಗಾರರು ಇರುವುದಿಲ್ಲ. ದಾವಾ ಆಸ್ತಿಗಳು ಹಳಿಂಗಳಿಯಲ್ಲಿ ಮತ್ತು ಶೆಗುಣಸಿಯಲ್ಲಿ ಎಷ್ಟು ಇವೆ ಎಂದು ಹೇಳಿ ಬರೆಸಿರುತ್ತೇನೆ. ಎರಡೂ ಊರಿನಲ್ಲಿರುವ ಜಮೀನು ಒಟ್ಟು 25 ಎಕರೆ ಇರುತ್ತದೆ. ಸರ್ಕಾರದವರು ಭೂಮಿಯನ್ನು ವಶಪಡಿಸಿಕೊಂಡು ಪರಿಹಾರ ಪಡೆದುಕೊಂಡ ಬಗ್ಗೆ ದಾವೆಯಲ್ಲಿ ಬರೆಸಿರುತ್ತೇನೋ ಇಲ್ಲವೋ ನೆನಪಿಲ್ಲ. ದಾವೆಯಲ್ಲಿ ಪಾಯಪ್ಪ, ಬಾಬು, ಜಿನ್ನಪ್ಪ ಹಾಗೂ ಮಹಾವೀರ ಯಾವ ಕಡೆ ಎಷ್ಟು ಕ್ಷೇತ್ರ ಪಾಲು ಬಂದಿರುತ್ತದೆ ಅಂತ ಬರೆಸಿದ ಬಗ್ಗೆ ಗೊತ್ತಿಲ್ಲ. ಪಾಯಪ್ಪನ ಕುಟುಂಬ ವ್ಯವಹಾರದ ಬಗ್ಗೆ ಈ ದಾವೆಯಲ್ಲಿ ಬರೆಸಿರುತ್ತೇವೆ. ಪಾಯಪ್ಪನ ಹೆಸರಿಗೆ ಉತಾರದಲ್ಲಿ ಸದರಿಯವರ ಹೆಸರು ಏಕೆ ಮುಂದುವರೆದಿರುತ್ತದೆ ಅಂತ ದಾವೆಯಲ್ಲಿ ಬರೆಸಿಲ್ಲ. 1991 ರಿಂದ 2009 ರವರೆಗೆ ದಾವಾ ಆಸ್ತಿಯ ಉತಾರು ತೆಗೆಸಿ ನೋಡಿರುತ್ತೇನೆ. ಸದರಿ ಉತಾರುಗಳು ಐದು ಇರುತ್ತವೆ. ಉತಾರದಲ್ಲಿ ಮೊದಲು ಪಾಯಪ್ಪನ ಹೆಸರು ಇದ್ದು ನಂತರ 9 ವರ್ಷದವರೆಗೆ ನನ್ನ ಹೆಸರಿನಲ್ಲಿವೆ. ಹಕ್ಕು ಬಿಟ್ಟುಕೊಟ್ಟ ಪತ್ರದ ಬಗ್ಗೆ ನನ್ನ ದಾವೆಯಲ್ಲಿ ಬರೆಸಿರುತ್ತೇನೆ. ನಾನು ಮೂಲ ಹಕ್ಕುಬಿಟ್ಟ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಮೂಲ ಹಕ್ಕುಬಿಟ್ಟ ಪತ್ರ ನೋಡಿರುತ್ತೇನೆ ಸದರಿ ಹಕ್ಕಬಿಟ್ ಪತ್ರದಲ್ಲಿ ಶೆಗುಣಸಿ ಜಮೀನು ಮತ್ತು ಹಳಿಂಗಳಿ ಜಮೀನು ಎರಡೂ ಇರುತ್ತವೆ ಎಂದರೆ ಸಾಕ್ಷಿಯು ಹಳಿಂಗಳಿ ಗ್ರಾಮದಲ್ಲಿ ಜಮೀನು ಮಾತ್ರ ಗೊತ್ತಿರುತ್ತದೆ 2009 ನೇ ಇಸವಿಯಲ್ಲಿ ನನಗೆ ಎಷ್ಟು ವಯಸ್ಸಿತ್ತು ಹೇಳಲು ಬರುವುದಿಲ್ಲ. ನಾನು 15.09.1984 ರಲ್ಲಿ ಜನಿಸಿರುತ್ತೇನೆ. ಹಕ್ಕು ಬಿಟ್ಟ ಪತ್ರ ನೋಂದಣಿ ಆಗಿರುವುದಿಲ್ಲ 1991 ರಿಂದ ಇಲ್ಲಿಯವರೆಗೆ ಪಾಯಪ್ಪನೆ ದಾವಾ ಜಮೀನಿನ ಕಬ್ಜೆಯಲ್ಲಿರುತ್ತಾರೆಂದರೆ ಸರಿಯಲ್ಲ. ಹಕ್ಕು ಬಿಟ್ಟ ಪತ್ರ ರೂ 100/- ಬಾಂಡ ಮೇಲೆ ಬರೆದಿರುತ್ತದೆ. ನಾನು ಪಾಯಪ್ಪನ

ಖೊಟ್ಟಿ ಸಹಿ ಮಾಡಿ ಹಕ್ಕು ಬಿಟ್ಟ ಪತ್ರ ಮಾಡಿರುತ್ತೇನೆಂದರೆ ಸರಿಯಲ್ಲ. ಪಾಯಪ್ಪ ಮತ್ತು ಆತನ ಇಬ್ಬರು ಮಕ್ಕಳು ಸಹಿ ಹಕ್ಕು ಬಿಟ್ಟ ಪತ್ರದಲ್ಲಿರುತ್ತದೆಂದು ನುಡಿಯುವರು ಪಾಯಪ್ಪನ ಇಬ್ಬರೂ ಸಹಿಗಳನ್ನು ಸಹ ನಾನು ಖೊಟ್ಟಿಯಾಗಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನಾಗಲಿ ಪ್ರತಿವಾದಿಯರಾಗಲಿ ಹಕ್ಕು ಬಿಟ್ಟ ಪತ್ರದನ್ವಯ ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಹಕ್ಕು ಬಿಟ್ ಪತ್ರ ಮಾಡಿ ಕೊಡಲು ಕಾರಣವೆನೆಂದರೆ ಸದರಿಯವರು ನಮ್ಮ ತಾಯಿಯನ್ನು ನೋಡಿಕೊಳ್ಳದೇ ಇರುವುದರಿಂದ ದಾವಾ ಜಮೀನನ್ನು ನಮಗೆ ಬಿಟ್ಟುಕೊಡಿ ಅಂತ ಹೇಳಿದ್ದರಿಂದ ನನ್ನ ಹೆಸರಿಗೆ ಬಿಟ್ಟುಕೊಟ್ಟಿರುತ್ತಾರೆ. ಆ ಕಾರಣಕ್ಕೆ ಹಕ್ಕು ಬಿಟ್ಟ ಪತ್ರ ಮಾಡಲಾಗಿದೆ ಈ ವಿಚಾರನವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೊ ಇಲ್ಲವೋ ನೆನಪಿಲ್ಲ ನಾನು ತಲಾಟಿ ಮಿಲಾಪೆಯಾಗಿ ಖೊಟ್ಟಿ ಹಕ್ಕು ಬಿಟ್ಟ ಪತ್ರದನ್ವಯ ಸುಳ್ಳು ಎಂಟ್ರಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಪಿ-5 ರಿಂದ 7 ಇವು ನನ್ನ ದಾವೆಗೆ ಅನುಕೂಲವಾಗಲೆಂದು ಖೊಟ್ಟಿಯಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ದಿ: 27.04.2018 ದಾವೆ ಮಾಡುವ ಸಮಯದಲ್ಲಿ ದಾವಾ ಜಮೀನುಗಳು ಪಾಯಪ್ಪನ ಹೆಸರಿನಲ್ಲಿದ್ದವು. ನಾವು ಹಾಜರುಪಡಿಸಿದ ದಾಖಲೆಗಳು ದಾವಾ ಆಸ್ತಿ ಪಾಯಪ್ಪನ ಹೆಸರಿನಲ್ಲಿ ಇದ್ದ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ನಿಪಿ-1 ರಿಂದ 4 ರ ಉತಾರುಗಳು 2016 ನೇ ಇಸವಿಯಲ್ಲಿ ಉತಾರುಗಳು ಇರುತ್ತವೆ. ಇವತ್ತಿನವರೆಗೂ ದಾವಾ ಆಸ್ತಿಗಳು ಪಾಯಪ್ಪನ ಹೆಸರಿನಲ್ಲಿರುತ್ತವೆ ಎಂದರೆ ಮೋಸದಿಂದ ತಮ್ಮ ಹೆಸರನ್ನು ನಮೂದಿಸಿಕೊಂಡಿರುತ್ತಾರೆಂದು ನುಡಿಯುವರು. ಪ್ರತಿವಾದಿ 2017-18 ನೇ ಇಸವಿಯಲ್ಲಿ ಮೊಸ ಮಾಡಿ ತನ್ನ ಹೆಸರು ಉತಾರನಲ್ಲಿ ಹಚ್ಚಿಕೊಂಡಿರುತ್ತಾನೆಂದು ನನ್ನ ದಾವೆಯಲ್ಲಿ ಬರೆಸಿರುತ್ತೇನೆ. ಪಾಯಪ್ಪ ಎಲ್ಲಿ, ಯಾವಾಗ ಯಾವ ರೀತಿ ಮೋಸ ಮಾಡಿರುತ್ತಾನೆಂದು ಬರೆಸಿರುತ್ತೇನೆ. ಹಾಗೆಂದು ಸುಳ್ಳು ನುಡಿಯುತ್ತಿದ್ಧೇನೆಂದರೆ ಸರಿಯಲ್ಲ. ದಾವಾ ಜಮೀನು ನೀರಾವರಿ ಜಮೀನು ಇದ್ದು ಮೊಟಾರ್ ಅಳವಡಿಸಿರುತ್ತಾರೆ. ಕರೆಂಟ್ ಮೊಟಾರ್ ಪರವಾನಿಗೆ ಕೆ.ಇ.ಬಿ.ಯಲ್ಲಿ ಯಾರ ಹೆಸರಿನಲ್ಲಿದೆ ಗೊತ್ತಿಲ್ಲ. ದಾವಾ ಜಮೀನು ಪಾಯಪ್ಪನ ಸ್ವಂತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಜಮೀನು ಎಷ್ಟು ಪಟ್ಟಿ ಇದೆ ಅಂತ ಗೊತ್ತಿಲ್ಲ. ಆದರೆ ಬೇರೆ ಬೇರೆ ಭಾಗದಲ್ಲಿ ಇರುತ್ತವೆ. ದಾವಾ ಜಮೀನಿನ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರೆ

ಸರಿಯಲ್ಲ. ದಾವಾ ಆಸ್ತಿಯ ಚೆಕ್ಕಬಂದಿ ಗೊತ್ತಿಲ್ಲ. ಚೆಕಬಂದಿ ಬಗ್ಗೆ ನಾನು ಬರೆಸಿಲ್ಲ ಎಂದರೆ ಸರಿಯಲ್ಲ. ಸರ್ಕಾರ ನಮ್ಮ ಜಮೀನಿನಲ್ಲಿ ಎಷ್ಟು ಜಮೀನನ್ನು ಸ್ವಾಧಿನಪಡಿಸಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಅಂತ ಗೊತ್ತಿಲ್ಲ. ಅದೇ ರೀತಿ ಎಷ್ಟು ಪರಿಹಾರ ಆಗಿತ್ತು ಅಂತ ಬರೆಸಿರುವುದಿಲ್ಲ. ಇವತ್ತಿನವರೆಗೂ ಪಾಯಪ್ಪನೆ ದಾವಾ ಜಮೀನಿನ ಸ್ವಾಧಿನಾನುಭವದಲ್ಲಿದ್ದು, ಕಬ್ಬು ಬೆಳೆ ಬೆಳೆದಿರುತ್ತಾರೆಂದರೆ ಸರಿಯಲ್ಲ. ದಿ: 09.03.1987 ರಂದು ಬುಜಬಲಿ ತೀರಿಕೊಂಡಿರುತ್ತಾರೆ. ದಾವಾ ಜಮೀನು ಎಷ್ಟು ಕಿಮ್ಮತ್ತಿನದು ಇರುತ್ತದೆ ಗೊತ್ತಿಲ್ಲ. ದಾವಾ ಜಮೀನು ಪಾಯಪ್ಪನ ಹೆಸರಿಗೆ ಎ.ಸಿ. ಕಡೆಯಿಂದ ಬದಲಾವಣೆ ಮಾಡಿಕೊಂಡಿದ್ದು ಗೊತ್ತಾಗಿರುತ್ತದೆ. ಎ.ಸಿ. ಮತ್ತು ಡಿ.ಸಿ. ಇವರ ಕಾಗದ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ ಈ ದಾವೆ ಹೊರತುಪಡಿಸಿ ನಮ್ಮ ತಾಯಿಯ ಕಡೆಯಿಂದ ಇನ್ನೊಂದು ದಾವೆ ಇದೇ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ. ಸದರಿ ಆ ದಾವೆಯಲ್ಲಿಯೂ ಕೂಡ ಪಾಯಪ್ಪನನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ಸದರಿ ದಾವೆಯ ನಂಬರ ಹೇಳಲಾಗುವುದಿಲ್ಲ. ಆ ದಾವೆಯಲ್ಲಿ ನಾನು ನನ್ನ ತಾಯಿ ಇರುತ್ತೇವೆಂದರೆ ಸರಿ. ದಾವಾ ಆಸ್ತಿಗಳು ನಮ್ಮ ತಂದೆಯಿಂದ ವಾಟ್ನಿ ಮುಖಾಂತರ ಬಂದಿದ್ದು ಅಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು,
ಬನಹಟ್ಟಿ